sdmimd

# Prajavaani

**Date:** Wednesday, August 23, 2017 **Page No.** 02

**Edition:** Mysore **Language:** Kannada



ರಿನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಟಿ.ಎಸ್‌.ಕೃಷ್ಣಮೂರ್ತಿ ಎಸ್‌ಡಿಎಂ–ಐಎಂಡಿ ನಿರ್ದೇಶಕ ಎನ್‌.ಆರ್‌.ಪರಶುರಾಮನ್ ಜೊತೆ ಕತೆಯಲ್ಲಿ ನಿರತರಾಗಿದ್ದರು. ಪ್ರೊ.ಎಂ.ಆರ್‌.ಸುರೇಶ್, ಎಚ್‌.ಗಾಯತ್ರಿ

## ವ್ಯಕ್ತಿ ಪೂಜೆಗೆ ಪ್ರೋತ್ಸಾಹ ಬೇಡ: ಕೃಷ್ಣಮೂರ್ತಿ

ಪ್ರಜಾವಾಣಿ ವಾರ್ತೆ

ಮೈಸೂರು: 'ಸ್ವಾತಂತ್ರ್ಯ ಬಂದ 20–30 ವರ್ಷಗಳಲ್ಲಿ ಭಾರತ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಲಿದೆ ಎಂದು ಅಂದಾಜಿಸಲಾಗಿತ್ತು. ಆದರೆ, 70 ವರ್ಷ ಕಳೆದರೂ ಅನಕ್ಷರತೆ, ಭ್ರಷ್ಟಾಚಾರ, ಬಡತನ ತಾಂಡವವಾಡುತ್ತಿದೆ. ಈಚಿನ 20–30 ವರ್ಷಗಳಲ್ಲಿ ಆಡಳಿತ ವ್ಯವಸ್ಥೆ ದಿಕ್ಕು ತಪ್ಪಿದೆ' ಎಂದು ಚುನಾವಣೆ ಆಯೋಗ ಮಾಜಿ ಮುಖ್ಯ ಆಯುಕ್ತ ಟಿ.ಎಸ್‌.ಕೃಷ್ಣಮೂರ್ತಿ ಬೇಸರ ವ್ಯಕ್ತಪಡಿಸಿದರು.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಅಭಿವೃದ್ಧಿ ನಿರ್ವಹಣಾ ಸಂಸ್ಥೆ (ಎಸ್‌ಡಿಎಂ-ಐಎಂಡಿ) ಸಂಸ್ಥಾಪನಾ ದಿನದ ಅಂಗವಾಗಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನಾವು ವ್ಯಕ್ತಿ ಪೂಜಿಸುವುದರಲ್ಲಿ ನಿಸ್ಸೀಮರು. ಅವರು ಆರಂಭ ಶೂರತ್ವ ತೋರುತ್ತಾರೆ. ಆದರೆ, ಆ ವಿಚಾರ ತಲೆಗೆ ಹೊಕ್ಕಿದ ಮೇಲೆ ಏನೂ ಕೆಲಸ ಮಾಡುವುದಿಲ್ಲ. ನಮಗೆ ಬೇಕಿರುವುದು ಮಾದರಿ ವ್ಯಕ್ತಿಗಳು. ಪ್ರಜಾಪ್ರಭುತ್ವ ಸಂರಕ್ಷಣೆ ನಿಟ್ಟಿನಲ್ಲಿ ವ್ಯಕ್ತಿ ಪೂಜೆ ಪ್ರೋತ್ಸಾಹಿಸಬಾರದು' ಎಂದರು.

'ಪಾಶ್ಚಾತ್ಯ ಶಿಕ್ಷಣ ಪದ್ಧತಿ ಕೆಟ್ಟದ್ದೇನಲ್ಲ. ಆದರೆ, ಅದನ್ನು ನಮ್ಮಲ್ಲಿ ಅನುಷ್ಠಾನ ಮಾಡುವ ರೀತಿ ಬದಲಾಗಬೇಕು. ಪಾಶ್ಚಾತ್ಯ ಸಂಸ್ಕೃತಿಯ ಸಕಾರಾತ್ಮಕ ಅಂಶಗಳನ್ನು ನಾವು ಅಳವಡಿಸಿಕೊಂಡಿಲ್ಲ. ಕೇವಲ ನಕಾರಾತ್ಮಕ ಅಂಶಗಳಿಗೆ ಮಾರು ಹೋಗಿದ್ದೇವೆ' ಎಂದು ಟೀಕಿಸಿದರು.

'ವಿವಿಧ ದೇಶಗಳ ನಾಯಕರೊಂದಿಗೆ ಬಾಂಧವ್ಯ ಅಗತ್ಯ. ಆದರೆ, ರಾಷ್ಟ್ರದೊಳಗಿನ ನಿರ್ವಹಣೆಯೇ ಸರಿ ಇಲ್ಲ. ವಿಶ್ವ ಸಮುದಾಯದ ಮೇಲೆ ನಮ್ಮ ದೇಶ ಬೀರುತ್ತಿರುವ ಪ್ರಭಾವ ಏನು' ಎಂದು ಪ್ರಶ್ನಿಸಿದರು.

'ಸ್ವಾತಂತ್ರ್ಯಕ್ಕೆ ಮುನ್ನ 500 ವಿವಿಧ ಪ್ರಾಂತ್ಯಗಳಿದ್ದವು. ಪ್ರತಿ ಪ್ರಾಂತ್ಯ ತನ್ನದೇ ಆದ ವಿಶೇಷತೆ ಹೊಂದಿತ್ತು. ಈಗಲೂ ಕೆಲ ರಾಜ್ಯಗಳ ನಡುವೆ ಭಿನ್ನಾಭಿಪ್ರಾಯಗಳಿವೆ. ಆದರೆ, ಸರಕು ಮತ್ತು ಸೇವಾ ತೆರಿಗೆಯು (ಜಿಎಸ್‌ಟಿ) ಜನರನ್ನು ಒಂದುಗೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ' ಎಂದು ತಿಳಿಸಿದರು.

ಮೈಸೂರು ನಗರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, 'ದೇಶದ ಉಳಿದ ನಗರಗಳಿಗೆ ಮೈಸೂರು ಮಾದರಿಯಾಗಿದೆ. ಪಾರಂಪರಿಕ ಹಾಗೂ ಗತವೈಭವವನ್ನು ರಕ್ಷಿಸಿಟ್ಟುಕೊಂಡಿದೆ' ಎಂದರು.